ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಶ್ರೀರಂಗಪಟ್ಟಣ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : **38/2020**

ಚಾ.ಸಾ. :- **26**
ಪ್ರಾ.ಸಾ. :- **10**

| | | |
|---|---|---|
| ಹೆಸರು | : | ಕೃಷ್ಣಪ್ಪ.ಕೆ.ವಿ. |
| ತಂದೆಯ ಹೆಸರು | : | ಲೇಟ್ ಕೆ.ಜಿ.ವೆಂಕಟರಾಮಯ್ಯ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ನಿವೃತ್ತ ಪಿ.ಐ., |
| ವಾಸಸ್ಥಳ | : | ಬೆಂಗಳೂರು. |

ಪ್ರಮಾಣೀಕರಿಸಲಾದ ದಿನಾಂಕಃ- **25.08.2026.**

<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :</u>

ನಾನು 2019 ರಿಂದ 2020 ರ ಅವಧಿಯಲ್ಲಿ ಶ್ರೀರಂಗಪಟ್ಟಣದಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 04.02.2019 ರಂದು ನಾನು ಚಾ.ಸಾ-25 ರವರಿಂದ ಕಡತವನ್ನು ಸ್ವೀಕರಿಸಿ ತನಿಖೆ ಮುಂದುವರೆಯಿಸಿರುತ್ತೇನೆ.

ನಂತರ ಅಪಘಾತಕ್ಕೆ ಒಳಗಾದ ವಾಹನದ ಮಾಲೀಕರಿಗೆ ಐ.ಎಂ.ವಿ.ಕಾಯ್ದೆಯಡಿ ನೋಟೀಸ್ ನೀಡಿರುತ್ತೇನೆ. ಸದರಿ ನೋಟೀಸನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-27 ಎಂದು ಗುರುತಿಸಲಾಯಿತು.

ನಂತರ ಅಪಘಾತಪಡಿಸಿದ ವಾಹನದ ಮಾಲೀಕರಿಗೆ ಐ.ಎಂ.ವಿ.ಕಾಯ್ದೆಯಡಿ ನೋಟೀಸ್ ನೀಡಿರುತ್ತೇನೆ. ಸದರಿ ನೋಟೀಸನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-28 ಎಂದು ಗುರುತಿಸಲಾಯಿತು.

ನಂತರ ಅಪಘಾತಕ್ಕೆ ಒಳಗಾದ ಇನ್ನೊಂದು ವಾಹನದ ಮಾಲೀಕರಿಗೆ ಐ.ಎಂ.ವಿ.ಕಾಯ್ದೆಯಡಿ ನೋಟೀಸ್ ನೀಡಿರುತ್ತೇನೆ. ಸದರಿ ನೋಟೀಸನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-29 ಎಂದು ಗುರುತಿಸಲಾಯಿತು.

ವೈದ್ಯರು ಮೃತರ ರಕ್ತದ ಮಾದರಿಯನ್ನು ಸಂಗ್ರಹಿಸಿ ನೀಡಿದ್ದು, ಅದನ್ನು FSL ಗೆ ಕಳುಹಿಸಿರುತ್ತೇನೆ.

4 ಗಾಯದ ಪ್ರಮಾಣ ಪತ್ರಗಳನ್ನು ಸ್ವೀಕರಿಸಿರುತ್ತೇನೆ. ಅವುಗಳನ್ನು ನಿಪಿ-30 ರಿಂದ 33 ಎಂದು ಗುರುತಿಸಲಾಯಿತು.

ತನಿಖಾ ಸಮಯದಲ್ಲಿ ಸಾಕ್ಷಿದಾರರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ.

ನಂತರ ಪ್ರಕರಣದ ತನಿಖೆ ಪೂರ್ಣಗೊಂಡಿದ್ದರಿಂದ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುತ್ತೇನೆ.

<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :</u>

ನೋಟೀಸ್ ನೀಡಿದ ನಂತರ ನಾನು ವರದಿಗಳನ್ನು ಸ್ವೀಕರಿಸಿರುತ್ತೇನೆ. ಗಾಯದ ಪ್ರಮಾಣ ಪತ್ರಗಳ ಮತ್ತು ಇತರೇ ದಾಖಲೆಗಳನ್ನು ಪ್ರಕರಣಕ್ಕೆಂದು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ವಾಹನದ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ.

ಸಾಕ್ಷಿದಾರರ ಹೇಳಿಕೆಗಳನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ತನಿಖಾ ಸಮಯದಲ್ಲಿ ಆರೋಪಿಯ ತಪ್ಪು ಇರುವುದಿಲ್ಲವೆಂದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ.

ಮೃತರ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದಿದ್ದರೂ ದೂರುದಾರರ ಕುಟುಂಬಕ್ಕೆ ವಿಮೆ ಪರಿಹಾರ ಕೊಡಿಸುವ ಸಲುವಾಗಿ ಸುಳ್ಳು ದಾಖಲಾತಿ ಸೃಷ್ಟಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ **:-**</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

ಪ್ರಧಾನ ಹಿರಿಯ ಸಿಜೆ ಮತ್ತು
ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.

**ಸಾಕ್ಷಿದಾರರ ಸಹಿ.**